43

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ॥ ವೈ.ಎ. ನಾರಾಯಣಸ್ವಾಮಿ ರವರು ನಿಯಮ 72ರ ಮೇರೆಗೆ ನೀಡಿರುವ ಸೂಚನೆಗೆ ಸರ್ಕಾರದ ಉತ್ತರ**

**(ಸಂಖ್ಯೆ: ಕವಿಪ/ಪ್ರಶಾ/43/150ನೇಅ/ನಿ–72/2023)**

**ವಿಷಯ:**

ಬೆಂಗಳೂರು ನಗರದ ಹೆಬ್ಬಾಳ ಮೇಲ್ಸೇತುವೆ (flyover) ಜನದಟ್ಟಣೆಯಿಂದ ಕೂಡಿರುವ ಮೇಲ್ಸೇತುವೆ ಆಗಿದ್ದು, ಈ ಮೇಲ್ಸೇತುವೆ ಕೆಳಗಡೆ ರೈಲ್ವೆ ಹಳಿ ಹಾದುಹೋಗಿರುವುದು ಸರಿಯಷ್ಟೆ. ರೈಲ್ವೆ ಹಳಿ ದಾಟಿ ರಿಂಗ್ ರಸ್ತೆಗೆ ದಿನಕ್ಕೆ ಸಾವಿರಾರು ಜನರು ಪ್ರಯಾಣಿಸುತ್ತಿದ್ದು, ಇದರಿಂದಾಗಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಇದನ್ನು ನಿವಾರಿಸಲು ರೈಲ್ವೆ ಹಳಿಗೆ ಒಂದು ಕೆಳಸೇತುವೆ ನಿರ್ಮಿಸಲು ಡಿ.ಪಿ.ಆರ್ (Detailed Project Report) ತಯಾರಿಸಿದ್ದು, ಟೆಂಡರ್ ಕರೆದು ಗುತ್ತಿಗೆದಾರರನ್ನು ನೇಮಿಸಲಾಗಿರುತ್ತದೆ ಮತ್ತು ಬಿ.ಬಿ.ಎಂ.ಪಿ ಯಿಂದ ಸುಮಾರು ಮೂರು ಕೋಟಿ ರೂಗಳನ್ನು ರೈಲ್ವೆ ಇಲಾಖೆಗೆ ಬಿಡುಗಡೆ ಮಾಡಿ 6–ವರ್ಷಗಳು ಕಳೆದಿದ್ದರೂ ಈವರೆವಿಗೂ ಸದರಿ ಕಾಮಗಾರಿ ಪ್ರಾರಂಭಿಸದಿರುವ ಬಗ್ಗೆ ಸದನದಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳ ಗಮನ ಸೆಳೆಯಬಯಸುತ್ತೇನೆ.

**ಉತ್ತರ:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಹೆಬ್ಬಾಳ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹೆಬ್ಬಾಳ ಫ್ಲೈಓವರ್ ಕೆಳಗಿನ ರೈಲ್ವೆ ಅಡಿಯಲ್ಲಿ ನಾಗರೀಕರು ಹಾಗೂ ಪಾದಚಾರಿಗಳಿಗಾಗಿ ರೈಲ್ವೆ ಅಂಡರ್–ಬ್ರಿಡ್ಜ್ (ಆರ್.ಯು.ಬಿ) ಅನ್ನು ನಿರ್ಮಿಸಲು ರೈಲ್ವೆ ಇಲಾಖೆಯನ್ನು ಕೋರಲಾಗಿತ್ತು. ನೈರುತ್ಯ ರೈಲ್ವೆ ಇಲಾಖೆಯು ಪಾದಚಾರಿ ಸುರಂಗ ಮಾರ್ಗವನ್ನು ನಿರ್ಮಿಸಲು ರೂ.3.50 ಕೋಟಿಗಳ ಅಂದಾಜು ಪಟ್ಟಿಯನ್ನು ಸಲ್ಲಿಸಿತ್ತು. ಸದರಿ ಅಂದಾಜು ಮೊತ್ತಕ್ಕೆ ಅನುಗುಣವಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ರೂ.2.00 ಕೋಟಿಗಳನ್ನು ನೈರುತ್ಯ ರೈಲ್ವೆ ಇಲಾಖೆಗೆ ಠೇವಣಿ ಮಾಡಲಾಗಿರುತ್ತದೆ.

ಆದರೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಹೆಬ್ಬಾಳ ಮೇಲ್ಸೇತುವೆಗೆ ಮತ್ತೊಂದು "ಹೆಚ್ಚುವರಿ ಪಥ" ವನ್ನು ನಿರ್ಮಾಣ ಮಾಡುವ ಕಾಮಗಾರಿ ಅನುಮೋದನೆಗೊಂಡ ಹಿನ್ನೆಲೆಯಲ್ಲಿ, ಪ್ರಸ್ತಾಪಿತ ಪಾದಚಾರಿ ಮಾರ್ಗ ನಿರ್ಮಾಣ ಕಾಮಗಾರಿಯನ್ನು ನೈರುತ್ಯ ರೈಲ್ವೆ ಇಲಾಖೆಯು ತಡೆಹಿಡಿದಿದ್ದರಿಂದ ಸದರಿ ಕಾಮಗಾರಿಯು ವಿಳಂಬವಾಗಿರುತ್ತದೆ.

ಪ್ರಸ್ತುತ ಹೆಬ್ಬಾಳ ಮೇಲ್ಸೇತುವೆಗೆ ಹೆಚ್ಚುವರಿ ಪಥವನ್ನು ನಿರ್ಮಾಣ ಮಾಡುವ ಕಾಮಗಾರಿಯ ವಿನ್ಯಾಸವನ್ನು ಅಂತಿಮಗೊಳಿಸಲಾಗಿದ್ದು, ಸದರಿ ಹೆಚ್ಚುವರಿ ಪಥವು ಹಾಲಿ ಇರುವ ಮೇಲ್ಸೇತುವೆಗೆ ಹೊಂದಿಕೊಳ್ಳದೇ ಇರುವುದರಿಂದ ಪ್ರತ್ಯೇಕವಾದ ಪಥವನ್ನು (Dedicated Lane) ವಿನ್ಯಾಸಗೊಳಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ, ಪಾದಚಾರಿ ಸುರಂಗ ಮಾರ್ಗವನ್ನು ಕೈಗೆತ್ತಿಕೊಳ್ಳಲು ಯಾವುದೇ ಅಡೆತಡೆಗಳಿರುವುದಿಲ್ಲವೆಂದು ರೈಲ್ವೆ ಇಲಾಖೆಗೆ ತಿಳಿಸಲಾಗಿತ್ತು.

ಅದರಂತೆ, ನೈರುತ್ಯ ರೈಲ್ವೆ ಇಲಾಖೆಯು ಪಾದಚಾರಿ ಸುರಂಗ ಮಾರ್ಗಕ್ಕೆ ಅಗತ್ಯವಿರುವ ಪ್ರೀಕ್ಯಾಸ್ಟ್ ಕಾಂಕ್ರೀಟ್ ಜೋಡಣೆಗಳನ್ನು ನಿರ್ಮಿಸಿಕೊಂಡಿದ್ದರು. ಆದರೆ, ಪ್ರಸ್ತುತ ಸದರಿ ರೈಲ್ವೆ ಮಾರ್ಗದಲ್ಲಿ Sub Urban Railway ಯೋಜನೆಯನ್ನು ಅನುಷ್ಠಾನಗೊಳಿಸಲು ಅನುಮೋದನೆ ದೊರೆತಿರುತ್ತದೆ. ಇದರಿಂದ,

. . .2/–

ಪುನಃ ಪಾದಚಾರಿ ಮಾರ್ಗ ನಿರ್ಮಾಣ ಯೋಜನೆಗೆ ಅಡಚಣೆ ಉಂಟಾಗಿದ್ದು, Sub Urban Railway ಯೋಜನೆಯ ವಿನ್ಯಾಸ ಅಂತಿಮಗೊಳ್ಳದೇ ಇರುವುದರಿಂದ, ಪಾದಚಾರಿ ಮಾರ್ಗ ನಿರ್ಮಾಣದ ಸ್ಥಳವು ನಿಗದಿಯಾಗದೇ, ಕಾಮಗಾರಿಯನ್ನು ಕೈಗೊಳ್ಳಲು ಸಾಧ್ಯವಾಗುತ್ತಿರುವುದಿಲ್ಲ.

ಈ ಪಾದಚಾರಿ ಮಾರ್ಗ ನಿರ್ಮಾಣ ಯೋಜನೆಯ ಬಗ್ಗೆ ನೈರುತ್ಯ ರೈಲ್ವೆ ಇಲಾಖೆಯೊಂದಿಗೆ ಸಮನ್ವಯ ಸಾಧಿಸುತ್ತಿದ್ದು, Sub Urban Railway ಯೋಜನೆಯ ವಿನ್ಯಾಸವನ್ನು ಅಂತಿಮಗೊಳಿಸಿಕೊಂಡು, ಸದರಿ ಯೋಜನೆಗೆ ಅನುಗುಣವಾಗಿ ಪಾದಚಾರಿ ಕೆಳಸೇತುವೆಯನ್ನು ತುರ್ತಾಗಿ ಕೈಗೆತ್ತಿಕೊಳ್ಳಲು ಯೋಜಿಸಲಾಗಿದೆ.

ಅದರಂತೆ, ದಿನಾಂಕ: 27-01-2023 ರಂದು ಪರ್ಯಾಯ ಜಾಗದ ಕುರಿತು ರೈಲ್ವೆ ಇಲಾಖೆಯ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ಮಾಡಲಾಗಿದ್ದು, "ಪಾದಚಾರಿ ಸುರಂಗ ಮಾರ್ಗ" ನಿರ್ಮಾಣಕ್ಕೆ ಮೀಸಲು ಜಾಗವನ್ನು ಗುರುತಿಸಿ, ಸದರಿ ಕಾಮಗಾರಿಯನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ.

---

**ಸಂಖ್ಯೆ: ನಅಇ 275 ಎಂಎನ್‌ವೈ 2023 (ಇ)**

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ